ಇ. ಇಲಾಖೆಯು ಸಾರ್ವಜನಿಕರ ಹಿತದೃಷ್ಟಿಯನ್ನು ಕಡೆಗಣಿಸಿ ಗುತ್ತಿಗೆದಾರನಿಗೆ ಸಹಾಯ ಮಾಡಲು ಸಂಬಂಧಪಟ್ಟ ನೊಂದ ಗ್ರಾಮಸ್ಥರ ಅಹವಾಲನ್ನು ಲೆಕ್ಕಿಸದೆ ಕಾನೂನನ್ನು ಉಲ್ಲಂಘನೆ ಮಾಡಿರುವುದು ಸರಿಯೆ?

ಶ್ರೀ ವಸಂತ ವಿ. ಸಾಲಿಯಾನ (ಮೀನುಗಾರಿಕೆ ಮತ್ತು ಬಂದರುಗಳ ರಾಜ್ಯ ಸಚಿವರು)

ಅ. ಈ ಕೆರೆಯು ಕೋಲಾರ ಜಿಲ್ಲಾ ಪಂಚಾಯಿತಿಯ ವ್ಯಾಪ್ತಿಯಲ್ಲಿ ಬರುತ್ತದೆ. ಮತ್ತು ಈ ಕೆರೆಯ ಮೀನು ಪಾಶುವಾರು ಹಕ್ಕನ್ನು ಮೂರು ವರ್ಷಗಳ ಅವಧಿಗೆ ಟೆಂಡರ್ ಮತ್ತು ಹರಾಜು ಮೂಲಕ ವಿಲೇವಾರಿ ಮಾಡಿದೆ.

ಆ. ಹೌದು. ಈ ವಿಷಯವು ಕೋಲಾರ ಜಿಲ್ಲಾ ಪಂಚಾಯಿತಿ ಗಮನಕ್ಕೆ ಬಂದಿರುತ್ತದೆ.

ಇ. ಸಾರ್ವಜನಿಕ ಹಿತದೃಷ್ಟಿಯಿಂದ ಸದರಿ ಕರೆಯ ಮೀನುಗಳಿಗೆ ಸತ್ತ ಕೋಳಿಗಳನ್ನು ಆಹಾರವಾಗಿ ನೀಡಬಾರದೆಂದು ಗುತ್ತಿಗೆದಾರರಿಗೆ ಕಟ್ಟುನಿಟ್ಟಾಗಿ ಎಚ್ಚರಿಸಲಾಗಿದೆ. ಸತ್ತ ಕೋಳಿಗಳನ್ನು ಉಪಯೋಗಿಸುವುದನ್ನು ತಡೆಗಟ್ಟುವ ಕ್ರಮವನ್ನು ಕೈಗೊಳ್ಳಲಾಗಿದೆ. ಪ್ರಸ್ತುತ ಸದರಿ ಕೆರೆಯನ್ನು ಶುಚಿಗೊಳಿಸಿರುವುದಾಗಿ ವರದಿ ಬಂದಿದೆ. ಜಿಲ್ಲಾ ಪಂಚಾಯಿತಿಯು ಗುತ್ತಿಗೆ ಅವಧಿಯನ್ನು ಮೂರು ವರ್ಷಗಳಿಂದ ಒಂದು ವರ್ಷಕ್ಕೆ ಕಡಿತಗೊಳಿಸಿರುತ್ತದೆ.

ಕಮ್ಮಾ ಜನಾಂಗದವನ್ನು 2-ಎ ವರ್ಗಕ್ಕೆ ಸೇರಿಸುವುದು

101(147): ಶ್ರೀ ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು (ಶಿವಾಜಿನಗರ) ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ.

ಅ. ರಾಜ್ಯದಲ್ಲಿರುವ ಕಮ್ಮಾ ಜನಾಂಗದವರ ಸಂಖ್ಯೆ ಎಷ್ಟು?

ಆ. ಈ ಜನಾಂಗವನ್ನು 3(ಎ)ವರ್ಗದಲ್ಲಿ ಸೇರಿಸಲಾಗಿದೆಯೇ?

ಇ. ಈ ಜನಾಂಗದವರು ಮೀಸಲಾತಿ ಸೌಲಭ್ಯಗಳಿಂದ ವಂಚಿತರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ. ಈ ಜನಾಂಗದಲ್ಲಿ ಬಡವರು ಹೆಚ್ಚಾಗಿರುವುದರಿಂದ ಹಾಗೂ ಇದೊಂದು ಹಿಂದುಳಿದ ವರ್ಗವಾಗಿರುವುದರಿಂದ ಕಮ್ಮಾ ಜನಾಂಗವನ್ನು 3(ಎ) ಪ್ರವರ್ಗದಿಂದ ಬೇರ್ಪಡಿಸಿ 2-ಎ ವರ್ಗದಲ್ಲಿ ಸೇರಿಸಲು ಸರ್ಕಾರ ಕ್ರಮ ಕೈಗೊಳ್ಳುತ್ತದೆಯೇ?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು)

ಅ. ಎರಡನೇ ಹಿಂದುಳಿದ ವರ್ಗಗಳ (ಶ್ರೀ ವೆಂಕಟಸ್ವಾಮಿ) ಆಯೋಗವು 1984ರಲ್ಲಿ ನಡೆಸಿದ ಸಮೀಕ್ಷೆಯ ಪ್ರಕಾರ ಕಮ್ಮಾ ಜನಾಂಗದ ಜನಸಂಖ್ಯೆ ರಾಜ್ಯದಲ್ಲಿ 89,065 ಇದೆ. ಜಾತಿಯ ಆಧಾರದ ಮೇಲೆ ಜನಗಣತಿ ನಡೆಯದಿರುವುದರಿಂದ ಈ ಜಾತಿಯ ಈಗಿನ ಜನಸಂಖ್ಯೆ ವಿವರಗಳು ಲಭ್ಯವಿರುವುದಿಲ್ಲ.

ಆ. ಹೌದು.

ಇ. ಈ ಜನಾಂಗದವರು ಹಾಲಿ ಮೀಸಲಾತಿ ಪಟ್ಟಿಯ ಪ್ರವರ್ಗ 3(ಎ) ನಲ್ಲಿ ಇರುವುದರಿಂದ ಮೀಸಲಾತಿ ಸೌಲಭ್ಯಗಳಿಂದ ವಂಚಿತರಾಗಿರುವುದಿಲ್ಲ.

ಈ. ಇಲ್ಲ

ರಾಜ್ಯದಲ್ಲಿ ಸಣ್ಣ ಕೈಗಾರಿಕೆಗಳಿಗೆ ಸಬ್ಸಿಡಿ ಹಣ ಪಾವತಿ

102(507): ಶ್ರೀ ಕಟ್ಟಾಸುಬ್ರಮಣ್ಯ ನಾಯ್ಡು (ಶಿವಾಜಿನಗರ) ಶ್ರೀ ಆರ್. ರೋಷನ್ ಬೇಗ್ (ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು) ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ.

ಅ. ಸಣ್ಣ ಕೈಗಾರಿಕೆಗಳಿಗೆ ಸರ್ಕಾರ ನೀಡಬೇಕಾಗಿರುವ ಬಾಕಿ ಸಬ್ಸಿಡಿ ಹಣ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)

ಆ. ಎಷ್ಟು ವರ್ಷಗಳಿಂದ ಸಬ್ಸಿಡಿ ಹಣ ಪಾವತಿ ಮಾಡದೇ ಬಾಕಿ ಇದೆ ನೀಡದೇ ಇರಲು ಕಾರಣಗಳೇನು;

ಇ. ಬಾಕಿ ಸಬ್ಸಿಡಿ ಹಣ ನೀಡುವ ಬಗ್ಗೆ ಸರ್ಕಾರದ ನಿಲುವೇನು; ಯಾವ ಹಣವನ್ನು ನೀಡಲಾಗುವುದು?

ಶ್ರೀ ಆರ್. ರೋಷನ್ ಬೇಗ್ (ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು)

ಅ. 31.3.2002ರ ಅಂತ್ಯಕ್ಕೆ ಸುಮಾರು 16,535 ಸಣ್ಣ ಮತ್ತು ಅತಿ ಸಣ್ಣ ಕೈಗಾರಿಕಾ ಘಟಕಗಳಿಗೆ ರೂ. 379.72 ಕೋಟಿ ಸಹಾಯಧನ ನೀಡಲು ಬಾಕಿ ಇರುತ್ತದೆ. ಜಿಲ್ಲಾವಾರು ಮಾಹಿತಿ ಅನುಬಂಧ - 1ರಲ್ಲಿ ಲಗತ್ತಿಸಲಾಗಿದೆ.

ಆ. ಡಿಸೆಂಬರ್ 1998 ರವರೆಗ ಪೂರ್ಣ ಸಹಾಯಧನವನ್ನು ನೀಡಲಾಗಿದೆ. ಜನವರಿ 99 ರಿಂದ ಸಹಾಯ ಧನ ನೀಡಲು ಬಾಕಿ ಇರುತ್ತದೆ ಆಯವ್ಯಯದಲ್ಲಿ ಅವಶ್ಯ ಮೊತ್ತವನ್ನು ಒದಗಿಸದ ಕಾರಣ ಬಿಡುಗಡೆ ಮಾಡಲಾಗಿಲ್ಲ.

ಇ. ಪೂರ್ಣ ಸಹಾಯಧನ ಬಿಡುಗಡೆ ಮಾಡಲು ಪ್ರಯತ್ನ ಮಾಡಲಾಗುತ್ತಿದೆ. ಸರ್ಕಾರವು ಇದರ ಬಗ್ಗೆ ಆರ್ಥಿಕ ಇಲಾಖೆಯ ಜೊತೆ ಸೂಕ್ತ ವ್ಯವಸ್ಥೆಗಾಗಿ ಹಾಗೂ ಈ ಆರ್ಥಿಕ ವರ್ಷದೊಳಗೆ ಬಿಡುಗಡೆ ಮಾಡಲು ಸಮಾಲೋಚನೆ ನಡೆಸುತ್ತಿದೆ.

Districtwise details of Subsidy Pendency available as on 31.3.2002

Sl.No.	Name of the District	No. of Units	Amount (Rs. In lakhs)
1.	Bangalore (Urban)	1280	6189.45
2.	Bangalore (Rural)	1710	4816.32
3.	Bagalkot	319	595.60